## ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 53/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05-11-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಚಿದಾನಂದ ಕರವೀರಪ್ಪನವರ | **ಪ್ರಾ.ಸಾ ಃ 10** |
| **ತಂದೆ ಃ ಗಂಡ ಹೆಸರು** | ಃ ನಾಗಪ್ಪ | **ಚಾ.ಸಾ ಃ 11** |
| **ವಯಸ್ಸು** | ಃ 56 ವರ್ಷ | |
| **ಉದ್ಯೋಗ** | ಃ ಪಿ ಎಸ್ ಐ ಕಲಘಟಗಿ | |
| **ವಾಸಸ್ಥಳ** | ಃ ಕಲಘಟಗಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು 2016 ರಿಂದ 2021 ರವರೆಗೆ ಇಲ್ಲಿಯವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಎ ಎಸ್ ಐ ಎಂದು ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 22.05.2017 ರಂದು ನ್ಯಾಯಾಲಯದಿಂದ ಬಂದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನೆ ನಂ 187/2017 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯೊಂದಿಗೆ ದೂರನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-26, ಸಾಕ್ಷಿ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಯಂಕಾಲ 1-30 ರಿಂದ 2-30 ರವರೆಗೆ ಗುನ್ನೆ ಸ್ಥಳಕ್ಕೆ ಬೇಟಿ ನೀಡಿ ನಿಪಿ-14 ರಂತೆ ಗುನ್ನೆ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-14 ಎಂದು ಗುರುತಿಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-14(ಸಿ) ಎಂದು ಗುರುತಿಸಲಾಯಿತು. ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ ಎಂ ಸಿ ವಕೀಲರಿಂದಃ**

ಪಿರ್ಯಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಗುನ್ನೆ ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ಸ್ಥಳದಲ್ಲಿ ಪಂಚನಾಮೆ ಜರುಗಿಸಿಲ್ಲ ಅಂದರೆ ಸರಿಯಲ್ಲ. ಆರೋಪಿತರು ಯಾವುದೆ ತಪ್ಪು ಮಾಡಿಲ್ಲ ಎಂದು ನನಗೆ ಗೊತ್ತಿದ್ದರೂ ಕೂಡಾ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಎನ್ ಎಸ್ ಯು ವಕೀಲರಿಂದಃ**

ಸದರಿ ದಿನ ನಾನು ಬೆಳಿಗ್ಗೆ 9-00 ರಿಂದ ರಾತ್ರಿ 9-00 ಗಂಟೆವರೆಗೆ ಕರ್ತವ್ಯದಲ್ಲಿ ಇದ್ದೆ. ದೂರು ಬಂದ ತಕ್ಷಣ ನಮ್ಮ ಡೈರಿಯಲ್ಲಿ ನಮೂದ ಮಾಡಿದ್ದೇವೆ. ದೂರಿನ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡುತ್ತೇವೆ. ಪಂಚನಾಮೆ ಮಾಡಲು ಸಾಕ್ಷಿದಾರರಿಗೆ ನೋಟೀಸ ಕೊಟ್ಟಿದ್ದೇನೆ. ಚಾಸಾ-2 ಮತ್ತು 3 ರವರು ಬ್ಯಾಂಕ ಉದ್ಯೋಗಿಗಳು. ನಾನು ಚಾಸಾ-2

ಮತ್ತು 3 ರವರಿಗೆ ನೋಟೀಸ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ಹೆ ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.